ಯುಗಾದಿ ಪ್ರಬಂಧ ಸ್ಪರ್ಧೆ 2025

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ನಳಿನಿ ಟಿ. ಭೀಮಪ್ಪ

ಕಲೆ: ಸಂತೋಷ್ ಸಸಿಹಿತ್ಲು

# ದೇವರ ಕೋಣೆ

**‘ಶುಕ್ಲಾಂಭರದರಂ ವಿಷ್ಣುಂ...’** ಎಂದು, ಸ್ನಾನದ ನಂತರ ಸಣ್ಣದಾಗಿ ಶ್ಲೋಕ ಹೇಳುತ್ತ ಅಜ್ಜಯ್ಯ ದೇವರಕೋಣೆಯನ್ನು ಪ್ರವೇಶಿಸುತ್ತಿದ್ದಾರೆ ಎಂದರೆ, ಮುಂದೆ ಹದಿನೈದು ನಿಮಿಷದಲ್ಲಿ, ಬೆಳಗಿನ ತಿಂಡಿ ತಯಾರಿರಬೇಕು ಎನ್ನುವ ಸೂಚನೆ ಅಡುಗೆಮನೆಯಲ್ಲಿರುವ ಹೆಂಗಸರಿಗೆ ಸಿಕ್ಕಿಬಿಡುತ್ತಿತ್ತು. ಅದಕ್ಕೂ ಮುಂಚೆ ಅವರು ಸ್ನಾನಕ್ಕೆ ಇಳಿಯುತ್ತಿದ್ದಂತೆ, ‘ನಿಮ್ಮಪ್ಪ ಸ್ನಾನಕ್ಕೆ ಹೋಗಿದಾರೆ, ಯಾರಾದರೂ ದೇವರ ಕೋಣೆ ನೆಲ ಅಂದ್ಕೊಂಡು ಬರ್‍ರೇ’ ಎಂದು ಅಜ್ಜಿಯ ಆಜ್ಞೆ ಮೊಳಗುತ್ತಿತ್ತು. ಮದುವೆಯ ವಯಸ್ಸಿಗೆ ಬಂದ ಐದು ಜನ ಸೋದರತ್ತೆಯರು, ದಿನಕ್ಕೊಬ್ಬರಂತೆ ನೆಲ ಒರೆಸುವ ರೂಢಿಯಿಟ್ಟುಕೊಂಡಿದ್ದರಿಂದ, ಅಂದಿನ ಪಾಳಿಯವರು ಸರಸರನೆ ಹಸಿಬಟ್ಟೆ ಅದ್ದಿ ಒರೆಸಿಕೊಂಡು ಬರುತ್ತಿದ್ದರು. ಅಜ್ಜ, ದೇವರ ಶ್ಲೋಕಗಳನ್ನು ಹೇಳುತ್ತಲೇ, ಮೊದಲಿಗೆ ವಿಭೂತಿಯ ಉಂಡೆಗೆ ಮೂರು ಬೆರಳನ್ನು ತಿಕ್ಕಿ, ಹಣೆಗೆ, ಕುತ್ತಿಗೆಗೆ ಪಟ್ಟೆ ಬಳಿದುಕೊಂಡು ಕೈಮುಗಿದು ಹೊರಬಂದರೆ ಮುಗಿಯಿತು, ಮತ್ತೆ ಆ ದೇವರ ಕೋಣೆಗೆ ಕಾಲಿಡುತ್ತಿದ್ದುದು ಮರುದಿನ ಬೆಳಗ್ಗೆಯೇ. ಪೂಜೆಯ ಕೆಲಸವೆಲ್ಲ ಅಪ್ಪಾಜಿಯದು.

ದೇವರಕೋಣೆಯ ಬಗ್ಗೆ ಬರೆಯುವಂತಹ ವಿಷಯ ಏನಿರುತ್ತದೆ ಎಂದು ನೀವು ಮೂಗು ಸಿಂಡರಿಸಬಹುದು. ಹುಟ್ಟಿ ಬೆಳೆದ ಮನೆಯಲ್ಲಿನ ಪ್ರತಿಯೊಂದು ಕೋಣೆಯ ಜೊತೆಗೂ ಕೆಲವು ನೆನಪುಗಳು ಶಾಶ್ವತವಾಗಿ ದಾಖಲಾಗಿಬಿಡುತ್ತವೆ. ಹಾಗೆ ಅತ್ಯಂತ ಹೆಚ್ಚಿನ ನೆನಪುಗಳ ಕಂತೆ ಈ ದೇವರಕೋಣೆಯದ್ದೇ. ಈಗಿನ ಹಾಗೆ ಮನೆಯಲ್ಲಿ ದೇವರಿಗೆಂದೇ ಪ್ರತ್ಯೇಕವಾಗಿ ಕೋಣೆ, ಮಾರ್ಬಲ್ಲು, ಟೈಲ್ಸ್ ಹಾಕಿದ ನೆಲ, ಗೋಡೆ ಅಂತೇನೂ ಇರಲಿಲ್ಲ. ಆಗಿನ ಕಾಲದ ದೇವರಕೋಣೆಯ ಪರಿಕಲ್ಪನೆಯೇ ಬೇರೆ. ಮನೆಯಲ್ಲೇ ಇದ್ದ ಎರಡು ಬೆಡ್ ರೂಮಿನಲ್ಲಿ, ಎಂಟು ಬೈ ಎಂಟು ಅಳತೆಯ ಪುಟ್ಟ ಕೋಣೆಯೇ ಆಗಿನ ನಮ್ಮ ಮನೆಯ ದೇವರ ಕೋಣೆ. ಅದು ಹಗಲಿನಲ್ಲಿ ದೇವರಕೋಣೆಯಾಗಿಯೂ, ರಾತ್ರಿಯಲ್ಲಿ ಅಪ್ಪ, ಅಮ್ಮ ಮತ್ತು ನಾವು ಮೂರುಜನ ಮಕ್ಕಳು ಮಲಗುವ ಕೋಣೆಯಾಗಿಯೂ ಬದಲಾಗುತ್ತಿತ್ತು. ನಿಜವಾಗಿಯೂ ಅಷ್ಟು ವರ್ಷ ಆ ಕಿಷ್ಕಿಂಧೆಯಂತಹ ಕೋಣೆಯ ಬಗ್ಗೆ ಸ್ವಲ್ಪವೂ ಅಸಮಾಧಾನ ಪಡದೆ ಅಮ್ಮ ಅದು ಹೇಗೆ ಸಂಸಾರ ಮಾಡುತ್ತಿದ್ದಳೋ ಎಂದು ಅಚ್ಚರಿಯಾಗುತ್ತದೆ.

ಅದು ಕೇವಲ ಕೋಣೆಯಂತಿದ್ದಿದ್ದರೆ ಅಚ್ಚರಿಪಡಬೇಕಿರಲಿಲ್ಲ. ಆದರೆ ಮನೆಯ ಜನರ ಇಡೀ ದಿನದ ಆಗುಹೋಗುಗಳು ಆ ಕೋಣೆಯ ಜೊತೆ, ಯಾವುದೋ ಒಂದು ರೀತಿಯಲ್ಲಿ ಸಂಪರ್ಕ ಹೊಂದಿಯೇ ಇರುತ್ತಿದ್ದವು. ಅದರೊಳಗೆ ಪೂರ್ವಕ್ಕೆ ದೇವಮೂಲೆಯಿಂದ ಮೂರಡಿ ಅಂತರವಿಟ್ಟು, ಹೆಚ್ಚುಕಡಿಮೆ ನಾಲ್ಕಡಿ ಎತ್ತರಕ್ಕೆ, ಒಂದೂವರೆ ಅಡಿ ಅಗಲ ಮುಂದಕ್ಕೆ ಇಟ್ಟಿಗೆ ಕಟ್ಟಿ, ಮೇಲೆ ಕಪ್ಪನೆಯ ಬಂಡೆ ಹಾಕಿಸಿ, ಕೆಳಗಿನ ಭಾಗವನ್ನು ಎರಡು ಬಾಗಿಲಿನ ಪುಟ್ಟ ಬೀರೂವನ್ನಾಗಿ ಮಾಡಿಕೊಂಡಿದ್ದರು. ಅದು ‘ಹಿಟ್ಟಿನ ಬೀರು’ ಎಂದೇ ಹೆಸರಾಗಿತ್ತು. ಮೇಲೆ ಜಗಲಿಯಲ್ಲಿ ಪುಟ್ಟ ಹಿತ್ತಾಳೆಯ ದೇವರಮಂಟಪದೊಳಗೆ, ಚಿಕ್ಕ ಪೀಠದ ಮೇಲೆ ನಾಗರಪ್ರಭಾವಳಿಯೊಳಗೆ ನಿಂತಿಹ ತಿರುಪತಿ ತಿಮ್ಮಪ್ಪ, ಜೊತೆಗೆ ಎರಡಿಂಚಿನ ಮೂರ್‍ನಾಲ್ಕು ವಿಗ್ರಹಗಳು ಸ್ಥಾಪಿತವಾಗಿದ್ದವು. ಸುತ್ತಮುತ್ತ ಫೋಟೋಗಳು, ದೇವರ ಸಾಮಾನುಗಳು ಹೀಗೆ ದೇವರ ಪೂಜೆಗೆ ಸಂಬಂಧಪಟ್ಟ ಎಲ್ಲ ವಸ್ತುಗಳು ಸ್ಥಾಪಿತವಾಗಿದ್ದವು. ಕೆಳಗಡೆ ಬೀರೂವಿನಲ್ಲಿ ಎಣ್ಣೆಟಿನ್ನಿನ ಡಬ್ಬಿಯಿಂದ ಮಾಡಿಸಿದ ಹಿಟ್ಟಿನ ಡಬ್ಬಗಳು ಒಂದರಮೇಲೊಂದು ಕೂಸುಮರಿಯ ಹಾಗೆ ಕುಳಿತುಕೊಂಡಿರುತ್ತಿದ್ದವು. ಅದರ ಮೇಲೊಂದು ಹಿಟ್ಟುಹಿಡಿಯುವ ಜರಡಿ, ಕಬ್ಬಿಣದ ತೂತಿನ ಜರಡಿ, ಬಿದಿರಿನ ಡಬ್ಬದ ಜರಡಿಗಳು ಮತ್ತು ಎರಡ್ಮೂರು ಮೊರಗಳನ್ನು ಒಂದರೊಳಗೊಂದು ಸೇರಿಸಿ ಇಟ್ಟಿದ್ದರು. ಇನ್ನು ಆ ಬೀರೂವಿನ ಪಕ್ಕದಲ್ಲಿ ಅಕ್ಕಿ ತುಂಬಿಸಿದ್ದ, ಕಬ್ಬಿಣದ ಕಪ್ಪನೆಯ ದೊಡ್ಡ ಡ್ರಮ್ಮು ಕಾಯಂ ಸದಸ್ಯತ್ವ ಪಡೆದ ಹಾಗೆ ಸ್ಥಾಪನೆಯಾಗಿತ್ತು. ಅದರ ಬದಿಯಲ್ಲಿ ಮತ್ತೊಂದು ಮೂಲೆಗೆ ಅಡ್ಡವಾಗಿ ಮನೆಯ ಹೆಂಗಸರ ಟ್ರಂಕುಗಳು, ಸೇಫ್ಟೀಪಿನ್ನು, ಹೇರ್‌ಪಿನ್ನಿನಿಂದಲೂ ಸರಾಗವಾಗಿ ತೆರೆಯಬಹುದಾದಂತಹ ಪುಟ್ಟ ಪುಟ್ಟ ಬೀಗ ಜಡಿದುಕೊಂಡು, ಲಗೋರಿ ಕಲ್ಲಿನ ಹಾಗೆ ಒಂದರ ಮೇಲೊಂದು ಪವಡಿಸಿರುತ್ತಿದ್ದವು. ಅವುಗಳ ಬೀಗಗಳನ್ನು ಆಯಾ ಟ್ರಂಕುಗಳಿಗೆ ಸಂಬಂಧಪಟ್ಟ ಹೆಣ್ಣುಮಕ್ಕಳು ಜೋಪಾನವಾಗಿ ತಾಳಿಸರಕ್ಕೆ ಸೇಫ್ಟೀಪಿನ್ನಿನ ಮೂಲಕ ಸಿಗಿಸಿಕೊಂಡು,

